ಕರ್ನಾಟಕ ಸರ್ಕಾರ
ಜಲಾನಯನ ಅಭಿವೃದ್ಧಿ ಇಲಾಖೆ

ಸಂ:ಜಅಇ/ಪಿಕೋ/ಎಫ್‌ಪಿಒ/20/19-20

ಆಯುಕ್ತರ ಕಛೇರಿ
ಜಲಾನಯನ ಅಭಿವೃದ್ಧಿ ಇಲಾಖೆ
7ನೇ ಮಹಡಿ, ಕೆ.ಹೆಚ್.ಬಿ ಕಾಂಪ್ಲೆಕ್ಸ್,
ಕಾವೇರಿ ಭವನ, ಕೆ.ಜಿ.ರಸ್ತೆ,
ಬೆಂಗಳೂರು-09, ದಿನಾಂಕ:09.01.2020

**ಸುತ್ತೋಲೆ-3**

**ವಿಷಯ:** ಎಂಪ್ಯಾನಲ್ ಆದ ಸಂಪನ್ಮೂಲ ಸಂಸ್ಥೆಗಳಿಗೆ ಇಲಾಖಾ ವತಿಯಿಂದ ರೈತ ಉತ್ಪಾದಕ ಸಂಸ್ಥೆ ರಚನೆ ಮಾಡಲು ಜಿಲ್ಲೆಗಳನ್ನು ನಿಗದಿಪಡಿಸುವ ಬಗ್ಗೆ.

**ಉಲ್ಲೇಖ:**
1. ಟೆಂಡರ್ ಪ್ರಕಟಣೆ ಸಂಖ್ಯೆ/ಜಅಇ/ಪಿಕೋ/ಎಫ್‌ಪಿಒ/07/2019-20 ದಿನಾಂಕ:18.06.2019
2. ಸಂಪನ್ಮೂಲ ಸಂಸ್ಥೆಗಳ ಎಂಪ್ಯಾನಲ್ ಆದೇಶ ಸಂಖ್ಯೆ:ಜಅಇ/ಪಿಸಿ/ಎಫ್‌ಪಿಒ/07/2019-20 ದಿನಾಂಕ:06.09.2019
3. ಈ ಕಛೇರಿಯ ಸುತ್ತೋಲೆ-1 ರ ಸಮ ಸಂಖ್ಯೆ: ಜಅಇ/ಪಿಕೋ/ಎಫ್‌ಪಿಒ/20/19-20 ದಿನಾಂಕ:04.10.2019
4. ಸಜ್ಜಲಶ್ರೀ ಸಮಗ್ರ ಕೃಷಿ ಅಧ್ಯಯನ & ಗ್ರಾಮೀಣ ಅಭಿವೃದ್ಧಿ ಸಂಸ್ಥೆ ದಿನಾಂಕ:01.01.2020
5. ಇಂಡಿಯನ್ ಸೊಸೈಟಿ ಆಫ್ ಅಗ್ರಿ ಬ್ಯುಸಿನೆಸ್ ಪ್ರೊಫೆಷನಲ್ಸ್ ದಿನಾಂಕ:02.01.20020

*****

ರೈತ ಉತ್ಪಾದಕರ ಸಂಸ್ಥೆಗಳ ರಚನೆಗೆ ಉಲ್ಲೇಖ-3 ರಲ್ಲಿ ತಿರ್ಮಾನಿಸಿದಂತೆ ಎಂಪ್ಯಾನಲ್ ಮಾಡಲಾದ ಈ ಕೆಳಕಂಡ ಎರಡು ಸಂಪನ್ಮೂಲ ಸಂಸ್ಥೆಗಳು ಸಲ್ಲಿಸಿರುವ ಉಲ್ಲೇಖ-4 & 5 ರಲ್ಲಿ ಕೋರಿರುವಂತೆ ಜಿಲ್ಲೆಗಳನ್ನು ನಿಗದಿಪಡಿಸಲಾಗಿದೆ. ಈಗಾಗಲೇ ಜಿಲ್ಲೆಗಳಲ್ಲಿ ಗುರುತಿಸಿರುವ ಗುಚ್ಛವಾರು ಬೆಳೆವಾರು ಮೌಲ್ಯ ಸರಪಳಿಯನ್ನು ಪರಿಶೀಲಿಸಿ ಆಯಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು/ ಕ್ಷೇತ್ರ ಮಟ್ಟದ ಅಧಿಕಾರಿಗಳೊಂದಿಗೆ ಚರ್ಚಿಸಿ ರೈತ ಉತ್ಪಾದಕ ಸಂಸ್ಥೆಗಳ ರಚನೆಗೆ ಗುಚ್ಛಗಳನ್ನು ಆಯ್ಕೆ ಮಾಡಲು ಸಂಬಂಧಿಸಿದ ಸಂಪನ್ಮೂಲ ಸಂಸ್ಥೆಗಳಿಗೆ ಸೂಚಿಸಿದೆ.

| ಕ್ರ.ಸಂ | ಸಂಪನ್ಮೂಲ ಸಂಸ್ಥೆಯ ಹೆಸರು | ನಿಗದಿಪಡಿಸಿದ ಜಿಲ್ಲೆ | ಷರಾ |
|---|---|---|---|
| 1 | ಇಂಡಿಯನ್ ಸೊಸೈಟಿ ಆಫ್ ಅಗ್ರಿ ಬ್ಯುಸಿನೆಸ್ ಫ್ರೊಫೆಷನಲ್ಸ್ | ಗುಲ್ಬರ್ಗಾ | ದಿನಾಂಕ:4.10.2019 ರ ಸುತ್ತೋಲೆ -1ರಲ್ಲಿ ನಿಗದಿಪಡಿಸಲಾಗಿದ್ದ ಯಾದಗಿರಿ ಮತ್ತು ಧಾರವಾಡ ಜಿಲ್ಲೆಗಳಲ್ಲಿನ ಕಾರ್ಯಾದೇಶವನ್ನು ರದ್ದುಗೊಳಿಸಲಾಗಿದೆ. |
| 2 | ಸಜ್ಜಲಶ್ರೀ ಸಮಗ್ರ ಕೃಷಿ ಅಧ್ಯಯನ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ | ಯಾದಗಿರಿ | ದಿನಾಂಕ: 4.10.2019 ರ ಸುತ್ತೋಲೆ -1 ರಲ್ಲಿ ನಿಗದಿಪಡಿಸಲಾಗಿದ್ದ ಕೊಪ್ಪಳ ಜಿಲ್ಲೆಯೊಂದಿಗೆ ಹೆಚ್ಚುವರಿಯಾಗಿ ಜಿಲ್ಲೆ ಹಂಚಿಕೆ ಮಾಡಲಾಗಿದೆ. |

Scanned by CamScanner

- ಸಂಪನ್ಮೂಲ ಸಂಸ್ಥೆಯವರು ಸಂಬಂಧಪಟ್ಟ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಹಾಗೂ ಕ್ಷೇತ್ರ ಸಿಬ್ಬಂದಿಯೊಂದಿಗೆ ಸಮಾಲೋಚಿಸಿ ದಿನಾಂಕ:30.01.2020 ರೊಳಗೆ ಬೆಳೆವಾರು ಮೌಲ್ಯ ಸರಪಳಿ ಹಾಗೂ ಗುಚ್ಛ ಗ್ರಾಮಗಳ ವಿವರಗಳನ್ನು ಸಲ್ಲಿಸುವುದು.
- ಗುಚ್ಛ ಗ್ರಾಮಗಳು ಹಾಗೂ ಬೆಳೆವಾರು ಮೌಲ್ಯ ಸರಪಳಿ ಅಂತಿಮಗೊಳಿಸಿದ ನಂತರ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಮತ್ತು ಸಂಪನ್ಮೂಲ ಸಂಸ್ಥೆಗಳೊಂದಿಗೆ ಲಗತ್ತಿಸಿರುವ ಒಡಂಬಡಿಕೆ ಕರಾರನ್ನು ರೂ. 100/- ಛಾಪಾ ಕಾಗದದಲ್ಲಿ ಮಾಡಿಕೊಳ್ಳುವುದು.
- ಟೆಂಡರ್‌ನ ಷರತ್ತು ಮತ್ತು ನಿಯಮಗಳನ್ವಯ ಸಂಪನ್ಮೂಲ ಸಂಸ್ಥೆಗಳು ಒಂದು ಗುಚ್ಛಕ್ಕೆ ರೂ.60000/- ಬ್ಯಾಂಕ್ ಗ್ಯಾರೆಂಟಿಯನ್ನು ಆಯಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಿಗೆ ಸಲ್ಲಿಸುವುದು.
- ಸಹಿ ಮಾಡಿದ ಒಡಂಬಡಿಕೆ ಮತ್ತು ಬ್ಯಾಂಕ್ ಗ್ಯಾರೆಂಟಿ ಪ್ರತಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.
- ಒಂದೇ ತಾಲ್ಲೂಕಿನ ವಿವಿಧ ಹೋಬಳಿಗಳಲ್ಲಿ ಐದು ರೈತ ಉತ್ಪಾದಕ ಸಂಸ್ಥೆಗಳ ಒಂದು ಗುಚ್ಛವನ್ನು ರಚಿಸುವುದು ಸಾಧ್ಯವಾಗದಿದ್ದಲ್ಲಿ ಅಕ್ಕ ಪಕ್ಕದ ತಾಲ್ಲೂಕಿನ ಹೋಬಳಿಗಳ ಗ್ರಾಮಗಳನ್ನು ಸಹ ಗುಚ್ಛದಲ್ಲಿ ಒಳಗೊಂಡಿರಬಹುದು.
- ಅನುಬಂಧ-IV ರಂತೆ ವಿವಿಧ ಹಂತಗಳಲ್ಲಿ ರೈತ ಉತ್ಪಾದಕ ಸಂಸ್ಥೆಯ ರಚನೆ ಕಾರ್ಯ ನಿರ್ವಹಿಸುವುದು ಈ ಬಗ್ಗೆ ಪ್ರಗತಿ ಆಧರಿಸಿ ಪಾವತಿ ಮಾಡಲಾಗುವುದು.
- ಒಡಂಬಡಿಕೆ ಸಹಿ ಮಾಡಿದ ನಂತರ ಯೋಜನಾ ಸಂಯೋಜಕರು ಹಾಗೂ ಸಂಪನ್ಮೂಲ ಸಂಸ್ಥೆ ಮುಖ್ಯಸ್ಥರಿಗೆ ರೈತ ಉತ್ಪಾದಕ ಉತ್ಕೃಷ್ಟತಾ ಕೇಂದ್ರದಿಂದ ಒಂದು ದಿನದ ಕಾರ್ಯಗಾರ ತರಬೇತಿಯನ್ನು ನೀಡಲಾಗುವುದು.
- ಅನುಬಂಧ-V ರಲ್ಲಿ ನಿಯತಕಾಲಿಕವಾಗಿ ವರದಿಗಳನ್ನು ಸಲ್ಲಿಸಲು ಸೂಚನೆ ನೀಡಲಾಗಿರುತ್ತದೆ. ಇದರ ಅನ್ವಯ ಒಡಂಬಡಿಕೆಯ ಮೊದಲ ಮಾಹೆಯೊಳಗೆ ಪ್ರಾರಂಭಿಕ ವರದಿ(Inception report) ಯನ್ನು ಸಲ್ಲಿಸುವುದು. ಸದರಿ ವರದಿಯನ್ನು ಗುಚ್ಛವಾರು ಪ್ರಸ್ತಾವನೆ ರೂಪದಲ್ಲಿ ಕೈ ಪಿಡಿ/ಪುಸ್ತಕ ತಯಾರಿಸುವುದು. ಸದರಿ ಪುಸ್ತಕವು ಆ ಜಿಲ್ಲೆಯ ಮತ್ತು ಗುಚ್ಛದ ಪರಿಚಯ, ಮೌಲ್ಯ ಸರಪಳಿ ಗುರುತಿಸುವಿಕೆ, ಗುರುತಿಸುವ ಅಧ್ಯಯನ (Diagnostic study) ಮತ್ತು ಕಾರ್ಯಸಾಧ್ಯತೆ ಅಧ್ಯಯನದ (Feasibility study) ಬಗ್ಗೆ ಮಾಹಿತಿಯನ್ನು ನೀಡುವುದು.
- ಸಂಪನ್ಮೂಲ ಸಂಸ್ಥೆಗಳು ಟೆಂಡರ್‌ನ ಷರತ್ತು ಮತ್ತು ನಿಯಮಗಳನ್ವಯ ಕಾರ್ಯ ನಿರ್ವಹಿಸಲು ಸೂಚಿಸಿದೆ.
- ರೈತ ಉತ್ಪಾದಕ ಸಂಸ್ಥೆಯ ರಚನೆಯನ್ನು ಮಾರ್ಗಸೂಚಿ ಹಾಗೂ ಕೇಂದ್ರ ಕಛೇರಿಯಿಂದ ಆಗಿಂದಾಗ್ಗೆ ನೀಡಲಾಗುವ ಸುತ್ತೋಲೆಗಳ ಅನ್ವಯ ನಿರ್ವಹಿಸುವುದು.

ಆಯುಕ್ತರು
ಜಲಾನಯನ ಅಭಿವೃದ್ಧಿ ಇಲಾಖೆ
ಹಾಗೂ ಅಧ್ಯಕ್ಷರು ಯೋಜನಾ ಉಸ್ತುವಾರಿ ಘಟಕ

ಪ್ರತಿಯನ್ನು ಮಾಹಿತಿಗಾಗಿ ಮುಂದಿನ ಕ್ರಮಕ್ಕಾಗಿ

1) ಕೃಷಿ ಆಯುಕ್ತರು, ಶೇಷಾದ್ರಿ ರಸ್ತೆ, ಬೆಂಗಳೂರು
2) ನಿರ್ದೇಶಕರು ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು
3) ಜಂಟಿ ಕೃಷಿ ನಿರ್ದೇಶಕರು ಗುಲ್ಬರ್ಗಾ/ ಯಾದಗಿರಿ
4) ಜಲಾನಯನ ಅಭಿವೃದ್ಧಿ ಇಲಾಖೆ ಮುಖ್ಯಸ್ಥರು ಹಾಗೂ ನೋಡಲ್ ಅಧಿಕಾರಿಗಳು.
5) ಇಂಡಿಯನ್ ಸೊಸೈಟಿ ಆಫ್ ಅಗ್ರಿ ಬ್ಯುಸಿನೆಸ್ ಪ್ರೊಫೆಷನಲ್ಸ್ ಫ್ಲಾಟ್ ನಂ B1, ನಂ B1, ಮೋಹನ್ ಕೋ-ಅಪರೇಟಿವ್ ಇಂಡಸ್ಟ್ರೀಯಲ್ ಎಸ್ಟೇಟ್, ಮಥುರ ರೋಡ್ , ನ್ಯೂ ಡೆಲ್ಲಿ -110044
6) ಸಜ್ಜಲಶ್ರೀ ಸಮಗ್ರ ಕೃಷಿ ಅಧ್ಯಯನ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸಜ್ಜಲಶ್ರೀ ಸಮಗ್ರ ಕೃಷಿ ಅಧ್ಯಯನ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಶಿವಸದನ ಎದುರು ಮದರ್ ವಾಟರ್ ಟ್ಯಾಂಕ್ , ಗುರುಗುಂಟ ರೋಡ್, ಪೋಸ್ಟ್ : ಲಿಂಗಸುಗೂರು 584122 ಜಿಲ್ಲೆ :ರಾಯಚೂರು

Scanned by CamScanner